KARC200009812024

Presented on : 08-05-2024
Registered on : 09-05-2024
Decided on : 03-08-2026
Duration: 02 yrs, 02 months, 26 days

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ದೇವದುರ್ಗ ನ್ಯಾಯಾಲಯ, ದೇವದುರ್ಗ.

ಉಪಸ್ಥಿತರು : ಶ್ರೀ.ಸುರೇಶ ಅಣ್ಣಪ್ಪ ಸವದಿ.

ಬಿ.ಎ,ಎಲ್.ಎಲ್.ಬಿ.,(ಸ್ಪೇಷಲ್).

ಇಂದು ದಿನಾಂಕ 3 ನೇ ಆಗಸ್ಟ 2026

ಸಿ. ಸಿ. ನಂ.334 : 2024

(ಗುನ್ನೆ ನಂ.28/2024– ಗಬ್ಬೂರು ಪೋಲಿಸ್ ಠಾಣೆ)

| | |
|---|---|
| **ಪಿರ್ಯಾದುದಾರರು :** | ಕರ್ನಾಟಕ ಸರಕಾರ, ಗಬ್ಬೂರು ಪೋಲಿಸ್ ಠಾಣೆ, ಗಬ್ಬೂರು. |
| | (ಸಹಾಯಕ ಸರಕಾರಿ ಅಭಿಯೋಜಕರು) |
| **ಆರೋಪಿತರು:** | 1. ಬಸನಗೌಡ ತಂದೆ ಶಿವರಾಜಪ್ಪ,<br>ವಯಸ್ಸುಃ 36 ವರ್ಷ, ಉಃ ಕೂಲಿಕೆಲಸ,<br>ಸಾಃ ಹಿರೇಬೂದುರು, ತಾಃ ದೇವದುರ್ಗ. |
| | ( ಶ್ರೀ.ವಿ.ಡಿ.ಸಿ. ವಕೀಲರು) |

| | |
|---|---|
| ಗುನ್ನೆ ನಡೆದ ದಿನಾಂಕ | 07.03.2024 |
| ಗುನ್ನೆಯನ್ನು ವರದಿ ಮಾಡಿದ ದಿನಾಂಕ | 07.03.2024 |
| ಅಂತಿಮ ವರದಿ ಸಲ್ಲಿಸಿದ ದಿನಾಂಕ | 02.05.2024 |
| ದೋಷಾರೋಪಣೆ ಮಾಡಿದ ದಿನಾಂಕ | 15.11.2024 |

| | |
|---|---|
| ಸಾಕ್ಷಿ ವಿಚಾರಣೆ ಪ್ರಾರಂಭವಾದ ದಿನಾಂಕ | 14.02.2025 |
| ತೀರ್ಪನ್ನು ಕಾಯ್ದಿರಿಸಿದ ದಿನಾಂಕ | 16.07.2026 |
| ತೀರ್ಪಿನ ದಿನಾಂಕ | 03.08.2026 |
| ಶಿಕ್ಷೆಯ ಆದೇಶದ ದಿನಾಂಕ, ಯಾವುದಾದರೂ ಇದ್ದರೆ | – |

## ತೀರ್ಪು

ಪ್ರಸ್ತುತ ಮೊಕದ್ದಮೆಯನ್ನು ಆರಕ್ಷಕ ಉಪನೀರಿಕ್ಷಕರು, ಗಬ್ಬೂರು ಪೋಲಿಸ ಠಾಣೆ, ಗಬ್ಬೂರು ಇವರು ಆರೋಪಿತರ ವಿರುದ್ಧ ಕರ್ನಾಟಕ ಅಬಕಾರಿ ಕಾಯ್ದೆ ಕಲಂ.32 ಮತ್ತು 34 ರನ್ವಯ ಶಿಕ್ಷಾರ್ಹ ಅಪರಾಧಗಳಿಗಾಗಿ ಸಲ್ಲಿಸಿದಂತಹ ದೋಷಾರೋಪಣಾ ಪತ್ರದ ಆಧಾರದ ಮೇರೆಗೆ ನೊಂದಾಯಿಸಿಕೊಳ್ಳಲಾಗಿದೆ.

2. **ಅಭಿಯೋಗ ಪ್ರಕರಣದ ಸಂಕ್ಷಿಪ್ತ ಸಾರಾಂಶ ಈ ಕೆಳಕಾಣಿಸಿದಂತಿದೆಃ**

ಗಬ್ಬೂರು ಪೊಲೀಸ್ ಠಾಣಾ ಸರಹದ್ದು, ಹಿರೇಬೂದುರು ಗ್ರಾಮದಲ್ಲಿ ಆರೋಪಿತನು ತನ್ನ ಕಿರಾಣಿ ಅಂಗಡಿ ಮುಂದೆ ಸಾರ್ವಜನಿಕ ಸ್ಥಳದಲ್ಲಿ ದಿನಾಂಕ 07.03.2024 ಬೆಳಿಗ್ಗೆ 12.00 ಗಂಟೆ ಸುಮಾರಿಗೆ ಯಾವುದೇ ಲೈಸನ್ಸ್ ಇಲ್ಲದೆ ಅಕ್ರಮವಾಗಿ 90 ಎಮ್.ಎಲ್.ನ ಓರಿಜಿನಲ್ ಚಾಯ್ಸ್ ಡಿಲಕ್ಸ್ ವಿಸ್ಕಿ 60 ಪೌಚ್‌ಗಳನ್ನು ಮಾರಾಟ ಮಾಡಿರುತ್ತಾರೆ ಎಂಬ ಪ್ರಕರಣ ದಾಖಲಾಗಿರುತ್ತದೆ. ಆದಕಾರಣ ಆರೋಪಿತನ ವಿರುದ್ಧ ಕರ್ನಾಟಕ ಅಬಕಾರಿ ಕಾಯ್ದೆ ಕಲಂ.32 ಮತ್ತು 34 ರಡಿಯಲ್ಲಿ ಅಪರಾಧವೆಸಗಿರುತ್ತಾರೆ.

3. ಘಟನೆಯ ಕುರಿತು ಆರಕ್ಷಕ ಉಪನೀರಿಕ್ಷಕರು, ಗಬ್ಬೂರು, ತಾವು ಅಮಾನತ್ತು ಪಡಿಸಿಕೊಂಡಿರುವ ಮದ್ಯ, ದೂರು ಮತ್ತು ಪಂಚನಾಮೆ ಆಧಾರದ ಮೇಲೆ ಪ್ರಕರಣವನ್ನು ದಾಖಲಿಸಿಕೊಂಡು, ತನಿಖೆಯನ್ನು ಕೈಗೊಂಡು ತನಿಖೆ ಪೂರ್ಣಗೊಂಡ ನಂತರ ಆರೋಪಿತನ

ವಿರುದ್ಧ ಸಾಕಷ್ಟು ಸಾಕ್ಷಿ ಪುರಾವೆಗಳು ದೊರೆತಿದ್ದ ಕಾರಣ ಅವರ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ.

4. ನ್ಯಾಯಾಲಯವು ದೋಷಾರೋಪಣಾ ಪಟ್ಟಿಯನ್ನು ಪರಿಶೀಲಿಸಿ ಮೇಲ್ಕಾಣಿಸಿದ ಅಪರಾಧಗಳಿಗೆ ಸೌಂಜ್ಞೆಯತೆನ್ನು ತೆಗೆದುಕೊಂಡು ಆರೋಪಿತನ ಹಾಜರಾತಿಯನ್ನು ಪಡೆದಿದ್ದು ಆರೋಪಿತನು ತನ್ನ ವಕೀಲರ ಮುಖಾಂತರ ಜಾಮೀನು ಅರ್ಜಿಯನ್ನು ಗುಜರಾಯಿಸಿ ಜಾಮೀನಿನ ಮೇಲೆ ಬಿಡುಗಡೆ ಹೊಂದಿರುತ್ತಾರೆ. ಆರೋಪಿತನಿಗೆ ಅಭಿಯೋಗ ಪರ ದಾಖಲಾತಿಗಳನ್ನು ದಂಡ ಪ್ರಕ್ರಿಯಾ ಸಂಹಿತೆಯ ಕಲಂ.207 ರನ್ವಯ ಒದಗಿಸಲಾಗಿದೆ. ನಂತರ ಆರೋಪಿತನಿಗೆ ಮೇಲ್ಕಾಣಿಸಿದ ಕಲಂ ರನ್ವಯ ಆರೋಪಣೆಯನ್ನು ರಚಿಸಿ ಓದಿ ಹೇಳಲಾಗಿದ್ದು ಆರೋಪಿತನು ತಾನು ಯಾವುದೇ ತಪ್ಪು ಮಾಡಿರುವುದಿಲ್ಲವೆಂದು ಉತ್ತರಿಸಿ ವಿಚಾರಣೆಯಾಗಬೇಕೆಂದು ಹಕ್ಕು ಸಾಧನೆ ಮಾಡಿರುತ್ತಾರೆ.

5. ಆರೋಪಿತನು ದೋಷಾರೋಪಣಾ ಪಟ್ಟಿಯಲ್ಲಿ ಕಾಣಿಸಿರುವಂತಹ ಅಪರಾಧಗಳನ್ನು ಮಾಡಿರುತ್ತಾರೆಂದು ಸಾಬೀತು ಪಡಿಸಲು ಅಭಿಯೋಜನೆಯು ಒಟ್ಟು ಏಳು ಸಾಕ್ಷಿದಾರರನ್ನು ಫ್ರಾಸಾಃ1 ರಿಂದ 7 ಎಂದು ವಿಚಾರಣೆಗೆ ಒಳಪಡಿಸಿಕೊಂಡು ಹಾಗೂ ಒಟ್ಟು ಐದು ದಾಖಲೆಯನ್ನು ನಿಶಾನೆ ನಿಪಿ-1 ರಿಂದ 5 ಹಾಗೂ ಮುದ್ದೆಮಾಲು-1 ಎಂದು ಗುರುತಿಸಿಕೊಂಡಿದೆ. ಅಭಿಯೋಜನೆಯ ಪರ ಸಾಕ್ಷ್ಯ ವಿಚಾರಣೆ ಮುಕ್ತಾಯವಾದ ನಂತರ ಆರೋಪಿತನು ದಂಡ ಪ್ರಕ್ರಿಯಾ ಸಂಹಿತೆಯ ಕಲಂ.313 ರನ್ವಯ ವಿಚಾರಣೆಗೊಳಪಡಿಸಿದ್ದು, ಆರೋಪಿತನು ತನ್ನ ವಿಚಾರಣಾ ಸಮಯದಲ್ಲಿ ಅಭಿಯೋಗ ಪರ ಸಾಕ್ಷಿದಾರರು ನುಡಿದಿರುವಂತಹ ಸಾಕ್ಷ್ಯವನ್ನು ಅಲ್ಲಗಳೆದು, ತಮ್ಮ ಪರ ಯಾವುದೇ ಪ್ರತಿರಕ್ಷೆ ಸಾಕ್ಷ್ಯವಿಲ್ಲವೆಂದು ನುಡಿದಿರುತ್ತಾರೆ ಮತ್ತು ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ.

6. ಅಭಿಯೋಗ ಪರ ಮತ್ತು ಆರೋಪಿತನ ಪರ ವಕೀಲರ ವಾದ-ಪ್ರತಿವಾದವನ್ನು ಆಲಿಸಿ ಕಡತಗಳನ್ನು ಪರಿಶೀಲನೆ ಮಾಡಲಾಯಿತು.

7. ಆರೋಪಿತನ ಮೇಲಿನ ಆರೋಪಣೆಯನ್ನು ನಿಸ್ಸಂದೇಹವಾಗಿ ರುಜುವಾತುಪಡಿಸುವುದು, ಅಭಿಯೋಗ ಮೊಕದ್ದಮೆ ಆದ್ಯ ಕರ್ತವ್ಯ. ಕಾರಣ ಈ ಕೆಳಕಂಡ ಅಂಶಗಳು ಈ ನ್ಯಾಯಾಲಯದ ತೀರ್ಮಾನಕ್ಕೆ ಉದ್ಭವಿಸಿರುತ್ತವೆಃ

1) ಅಭಿಯೋಜನೆಯು ಹಿರೇಬೂದುರು ಗ್ರಾಮದಲ್ಲಿ ಆರೋಪಿತನು ತನ್ನ ಕಿರಾಣಿ ಅಂಗಡಿ ಮುಂದೆ ಸಾರ್ವಜನಿಕ ಸ್ಥಳದಲ್ಲಿ ದಿನಾಂಕ 07.03.2024 ಬೆಳಿಗ್ಗೆ 12.00 ಗಂಟೆ ಸುಮಾರಿಗೆ ಯಾವುದೇ ಲೈಸನ್ಸ್ ಇಲ್ಲದೆ ಅಕ್ರಮವಾಗಿ 90 ಎಮ್.ಎಲ್.ನ ಓರಿಜಿನಲ್ ಚಾಯ್ಸ್ ಡಿಲಕ್ಸ್ ವಿಸ್ಕಿ 60 ಪೌಚ್‌ಗಳನ್ನು ಮಾರಾಟ ಮಾಡಿ ಆ ಮೂಲಕ ಕರ್ನಾಟಕ ಅಬಕಾರಿ ಕಾಯ್ದೆ ಕಲಂ.32 ಮತ್ತು 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಎಸಗಿರುತ್ತಾರೆಂದು ಅಭಿಯೋಗದವರು ಸಂಶಾಯಾತೀತವಾಗಿ ರುಜುವಾತು ಪಡಿಸಿರುತ್ತಾರೆಯೇ?

2) ಯಾವ ಆದೇಶ?

8. ಮೇಲ್ಕಾಣಿಸಿದ ಅಂಶಗಳಿಗೆ ನನ್ನ ಉತ್ತರಗಳು ಈ ಕೆಳಗಿನಂತಿವೆಃ

ಅಂಶ.1 ಃ ನಕರಾತ್ಮಕವಾಗಿ,

ಅಂಶ.2 ಃ ಅಂತಿಮ ಆದೇಶದಂತೆ ಈ ಕೆಳಗಿನ

## ಃಃ ಕಾರಣಗಳು ಃಃ

9. **ಅಂಶ.1ಃ–** 1 ಚಾಸಾ–2/ ಫ್ರಾಸಾ–1/ ರವಿಂದ್ರ ತಂದೆ ಬಸ್ಸಪ್ಪ ಮತ್ತು ಚಾಸಾ–3/ ಫ್ರಾಸಾ–2/ ಕುಮಾರಸ್ವಾಮಿ ತಂದೆ ಬಸ್ಸಯ್ಯ ಸ್ವಾಮಿ ಪಂಚಸಾಕ್ಷಿದಾರರು, ಸದರಿಯವರು ತಮ್ಮ ಸಾಕ್ಷ್ಯದಲ್ಲಿ, ಈ ಪ್ರಕರಣದ ಬಗ್ಗೆ ನಮಗೆ ಯಾವುದೇ ಮಾಹಿತಿ ಇಲ್ಲ. ಪೋಲಿಸರು ನಮ್ಮ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ. ಯಾವುದೇ ಅಕ್ರಮ ಮಧ್ಯವನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ. ನಿಪಿ–1 ರಲ್ಲಿ ಬರೆದ ವಿಷಯಗಳು ಗೊತ್ತಿಲ್ಲ ಎಂಬುದಾಗಿ ನುಡಿದಿರುತ್ತಾರೆ. ಅಭಿಯೋಜನೆಯು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ

ನ್ಯಾಯಾಲಯದ ಅನುಮತಿ ಪಡೆದು ಪಾಟೀಸವಾಲನ್ನು ಮಾಡಿದ್ದು, ಸದರಿ ಪಾಟೀಸವಾಲಿನಲ್ಲಿ ಅಭಿಯೋಜನೆಯು ತನ್ನ ಪ್ರಕರಣಕ್ಕೆ ಪೂರಕವಾಗುವಂತಹ ಯಾವುದೇ ಸಂಗತಿಗಳನ್ನು ಸಾಕ್ಷಿಯಿಂದ ಹೊರತರುವಲ್ಲಿ ವಿಫಲವಾಗಿರುತ್ತದೆ.

10. ಚಾಸಾ-6/ಪ್ರಾಸಾ-3/ ದೇವರಾಜ ತಂದೆ ವಿಶ್ವನಾಥ ರೆಡ್ಡಿ, ಸದರಿಯವರು ತಮ್ಮ ಸಾಕ್ಷ್ಯದಲ್ಲಿ, ಪ್ರಕರಣದ ಬಗ್ಗೆ ನನಗೇನು ಗೊತ್ತಿಲ್ಲ. ಪೋಲಿಸರಿಗೆ ನಾನು ಯಾವುದೇ ಹೇಳಿಕೆ ನೀಡಿರುವುದಿಲ್ಲ ಎಂಬುದಾಗಿ ನುಡಿದಿರುತ್ತಾರೆ. ಅಭಿಯೋಜನೆಯು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ನ್ಯಾಯಾಲಯದ ಅನುಮತಿ ಪಡೆದು ಪಾಟೀಸವಾಲನ್ನು ಮಾಡಿದ್ದು, ಸದರಿ ಪಾಟೀಸವಾಲಿನಲ್ಲಿ ಅಭಿಯೋಜನೆಯು ತನ್ನ ಪ್ರಕರಣಕ್ಕೆ ಪೂರಕವಾಗುವಂತಹ ಯಾವುದೇ ಸಂಗತಿಗಳನ್ನು ಸಾಕ್ಷಿಯಿಂದ ಹೊರತರುವಲ್ಲಿ ವಿಫಲವಾಗಿರುತ್ತದೆ.

11. ಚಾಸಾ-4/ ಪ್ರಾಸಾ-4/ ಹನುಮಂತ ತಂದೆ ಯಂಕಪ್ಪ ಇವರು ತಮ್ಮ ಸಾಕ್ಷಿಯಲ್ಲಿ ದಿನಾಂಕ 07-03-2024 ರಂದು ಬೆಳಿಗ್ಗೆ 11.00 ಗಂಟೆಗೆ ನಾನು ಮತ್ತು ಪಿ.ಎಸ್.ಐ, ಇತರೆ ಸಿಬ್ಬಂದಿಗಳು ಠಾಣೆಯಲ್ಲಿ ಇದ್ದಾಗ ಪಿ.ಎಸ್.ಐ ಇವರಿಗೆ ಹಿರೇಬುದೂರು ಗ್ರಾಮದಲ್ಲಿ ಅಕ್ರಮ ಮದ್ಯ ಮಾರಾಟ ಮಾಡುತ್ತಿದ್ದಾರೆಂದು ಬಾತ್ಮಿ ಬಗ್ಗೆ ತಿಳಿಸಿದ್ದು ತಕ್ಷಣ ಚಾಸಾ-2 ಮತ್ತು 3 ರವರನ್ನು ಬರಮಾಡಿಕೊಂಡು ಸರಕಾರಿ ವಾಹನದಲ್ಲಿ ಹೊರಟು ಹಿರೇಬೂದೂರು ಗ್ರಾಮದ ಹೊರ ವಲಯದಲ್ಲಿ ಮರೆಯಲ್ಲಿ ನಿಲ್ಲಿಸಿ ಸ್ವಲ್ಪ ದೂರ ನಡೆದುಕೊಂಡು ಹೋಗಿ ಮರೆಯಲ್ಲಿ ನಿಂತು ನೋಡಲಾಗಿ ಒಬ್ಬ ವ್ಯಕ್ತಿ ಕಿರಾಣಿ ಅಂಗಡಿ ಮುಂದೆ ಸಾರ್ವಜನಿಕ ಸ್ಥಳದಲ್ಲಿ ಅಕ್ರಮ ಮದ್ಯದ ಬಾಟಲಿಗಳನ್ನು ಚೀಲದಲ್ಲಿ ಇಟ್ಟುಕೊಂಡು ಮಾರಾಟ ಮಾಡುತ್ತಿದ್ದು ಆತನ ಸುತ್ತಲೂ ಜನರು ನಿಂತು ಪೌಚುಗಳನ್ನು ಖರೀದಿ ಮಾಡುತ್ತಿದ್ದು ತಕ್ಷಣ ಮಧ್ಯಾಹ್ನ 12.00 ಗಂಟೆಗೆ ದಾಳಿ ಮಾಡಿದ್ದು ಜನರು ಓಡಿ ಹೋಗಿದ್ದು ಮಾರಾಟ ಮಾಡುತ್ತಿದ್ದ ವ್ಯಕ್ತಿ ಸಿಕ್ಕಿದ್ದು ಆತನನ್ನು ವಿಚಾರಿಸಿದಾಗ ಆತನ ಹೆಸರು ಬಸನಗೌಡ ತಂದೆ ಶಿವರಾಜಪ್ಪ ಎಂದು ತಿಳಿದು ಬಂದಿದ್ದು ಆತನ ಬಳಿ ಮದ್ಯ ಮಾರಾಟ ಮಾಡುವ ಪರವಾನಿಗೆ ಇಲ್ಲದಿರುವುದು ತಿಳಿಸಿರುತ್ತಾನೆ ನಂತರ ಸ್ಥಳದಲ್ಲಿ

ಪಂಚರ ಸಮಕ್ಷಮ ಮಧ್ಯದ ಪೌಚುಗಳನ್ನು ಪರಿಶೀಲನೆ ಮಾಡಿದಾಗ ಅದರಲ್ಲಿ 90 ಎಂ.ಎಲ್ 60 ಓ.ಸಿ ಡಿಲಕ್ಸ ವಿಸ್ಕಿ ಪೌಚುಗಳು ಇದ್ದು ಅವುಗಳನ್ನು ಜಪ್ತಿ ಮಾಡಿಕೊಂಡು ಅವುಗಳನ್ನು ರಾಸಾಯನಿಕ ಪರೀಕ್ಷೆಗೆ ಪ್ರತ್ಯೇಕವಾಗಿ ಬಿಳಿ ಬಟ್ಟೆಯಲ್ಲಿ ಸುತ್ತಿ ಪಂಚನಾಮೆಯನ್ನು ಮಧ್ಯಾಹ್ನ 12.00 ರಿಂದ 01.00 ಗಂಟೆ ವರೆಗೆ ಮಾಡಿರುತ್ತೇವೆ. ನಂತರ ಎ.ಎಸ್.ಐ ಇವರು ಠಾಣೆಗೆ ಬಂದು ಮುಂದಿನ ಕ್ರಮಕ್ಕಾಗಿ ನೀಡಿರುತ್ತಾರೆ ಎಂದು ನಾನು ಹೇಳಿಕೆ ನೀಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ.

12. ಸದರಿ ಸಾಕ್ಷಿದಾರರನ್ನು ಆರೋಪಿ ಪರ ವಕೀಲರು ಪಾಟೀಸವಾಲಿಗೆ ಒಳಪಡಿಸಿದಾಗ, ಪಂಚರನ್ನು ಪಿ.ಎಸ್.ಐ ಇವರು ಬರಮಾಡಿಕೊಂಡಿರುತ್ತಾರೆ. ಆರೋಪಿ ಅಂಗಡಿಯಿಂದ ನಮ್ಮ ವಾಹನ 200 ಮೀಟರ ಅಂತರದಲ್ಲಿ ನಿಲ್ಲಿಸಿರುತ್ತೇವೆ. ಅಂಗಡಿ ಉತ್ತರಾಬಿಮುಖವಾಗಿ ಇರುತ್ತದೆ. ನಮ್ಮ ವಾಹನವನ್ನು ಉತ್ತರಾಬಿಮುಖವಾಗಿ ನಿಲ್ಲಿಸಿರುತ್ತೇವೆ. ನಾವು ದಾಳಿ ಮಾಡಿದಾಗ ಸಾರ್ವಜನಿಕರು ಅಂದಾಜು 7-8 ಜನ ಇದ್ದರು. ಓಡಿ ಹೋಗುತ್ತಿದ್ದವರಲ್ಲಿ ದೇವರಾಜ ಎನ್ನುವ ವ್ಯಕ್ತಿ ಸಿಕ್ಕಿಬಿದ್ದಿದ್ದು ಆತನ ಬಳಿ ಯಾವುದೇ ಮಧ್ಯದ ಪೌಚುಗಳು ಇರಲಿಲ್ಲ. ದೇವರಾಜನ ತಂದೆ ಹೆಸರು ಹೇಳಲು ಬರುವುದಿಲ್ಲ. ಚಾಸಾ-6 ದೇವರಾಜ ತಂದೆ ವಿಶ್ವನಾಥರೆಡ್ಡಿ ಸದರಿ ದಿನ ಓಡಿ ಹೋದವರಲ್ಲಿ ಸಿಕ್ಕಿಬಿದ್ದ ಸಾರ್ಜನಿಕ ವ್ಯಕ್ತಿ ಆಗಿರುತ್ತಾನೆ. ಅಂಗಡಿ ಸುತ್ತಮುತ್ತ ಮನೆಗಳು ಇವೆ ಸಾಕ್ಷಿ ಅಂದಾಜು 100 ಮೀಟರ್ ಅಂತರದಲ್ಲಿ ಮನೆಗಳು ಇವೆ ಎಂದು ನುಡಿಯುತ್ತಾರೆ. ಮಧ್ಯಾಹ್ನ 12 ಗಂಟೆಗೆ ಜನರು ತಿರುಗಾಡುತ್ತಾರೆ ಎಂದರೆ ಸರಿ ಎಂಬುವುದಾಗಿ ನುಡಿದಿರುತ್ತಾರೆ.

13. ಚಾಸಾ-8/ ಫ್ರಾಸಾ-5/ ಹೇಮಂತ ತಂದೆ ರಾಮಣ್ಣ ಇವರು ತಮ್ಮ ಸಾಕ್ಷಿಯಲ್ಲಿ ದಿನಾಂಕ 07.03.2024 ರಂದು ಮಧ್ಯಾಹ್ನ 02.10 ಗಂಟೆಗೆ ನಾನು ಠಾಣ ಪ್ರಭಾರದಲ್ಲಿ ಇದ್ದಾಗ ಚಾಸಾ-1 ರವರು ಠಾಣೆಗೆ ಹಾಜರಾಗಿ ನೀಡಿದ ದೂರು, ಪಂಚನಾಮೆ ಮತ್ತು ಮುಮಾಗಳ ಆಧಾರದ ಮೇಲೆ ಠಾಣಾ ಗುನ್ನೆ ನಂ.28/2024 ರಲ್ಲಿ ಪ್ರಕರಣ ದಾಖಲು ಮಾಡಿಕೊಂಡು ಪ್ರ.ವ ವರದಿ ತಯಾರಿಸಿ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಅದೇ ದಿನ

ಸಾಕ್ಷಿದಾರರ ಹೇಳಿಕೆಗಳನ್ನು ಪಡೆದಿರುತ್ತೇನೆ. ದಿನಾಂಕ 12.04.2024 ರಂದು ಮುಮಾಗಳನ್ನು ರಾಸಾಯನಿಕ ಪರೀಕ್ಷೆಗೆ ಕಳಿಸಿರುತ್ತೇನೆ. ದಿನಾಂಕ 17.04.2024 ರಂದು ರಾಸಾಯನಿಕ ವರದಿ ಪಡೆದಿರುತ್ತೇನೆ. ನಂತರ ಆರೋಪಿ ವಿರುದ್ದ ಅಂತಿಮ ವರದಿ ಸಲ್ಲಿಸಿರುತ್ತೇನೆ. ಸಾಕ್ಷಿಯು ದೂರು, ಪ್ರಥಮ ವರ್ತಮಾನ ವರದಿ ಮತ್ತು ರಾಸಾಯನಿಕ ವರದಿಯನ್ನು ಗುರುತಿಸಿಕೊಂಡು ಸಾಕ್ಷಿ ನುಡಿದಿರುತ್ತಾರೆ.

14. ಸದರಿ ಸಾಕ್ಷಿದಾರರನ್ನು ಆರೋಪಿ ಪರ ವಕೀಲರು ಪಾಟೀಸವಾಲಿಗೆ ಒಳಪಡಿಸಿದಾಗ, ಸಾಕ್ಷಿದಾರರ ಹೇಳಿಕೆಯನ್ನು ಅದೇ ದಿನ ಮಧ್ಯಾಹ್ನ ಅಂದಾಜು 03.30 ಗಂಟೆಗೆ ಪಡೆದಿರುತ್ತೇನೆ. ರಾಸಾಯನಿಕ ಪ್ರಯೋಗಾಲಯಕ್ಕೆ ಸಿಬ್ಬಂದಿ ಮೂಲಕ ಕಳಿಸಿರುತ್ತೇನೆ ಆದರೆ ಅವರ ಹೆಸರು ಹೇಳಲು ಬರುವುದಿಲ್ಲ. ಆರೋಪಿಗೆ ನೋಟಿಸು ನೀಡಿರುತ್ತೇನೆ ಎಂಬುವುದಾಗಿ ನುಡಿದಿರುತ್ತಾರೆ.

15. ಚಾಸಾ–1/ ಫ್ರಾಸಾ–6/ ಮಂಜುನಾಥ ಟಿ.ಡಿ. ತಂದೆ ದಾಳರಂಗಯ್ಯ, ಸದರಿಯವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 07–03–2024 ರಂದು ಬೆಳಿಗ್ಗೆ 11.00 ಗಂಟೆಗೆ ನಾನು ಠಾಣೆಯಲ್ಲಿ ಇದ್ದಾಗ ಹಿರೇ ಬೂದೂರು ಗ್ರಾಮದ ಸಾರ್ವಜನಿಕ ಸ್ಥಳದಲ್ಲಿ ಪರವಾನಿಗೆ ಇಲ್ಲದೇ ಅಕ್ರಮ ಮಧ್ಯ ಮಾರಾಟ ಮಾಡುತ್ತಿದ್ದಾರೆಂದು ಬಾತ್ಮಿ ಬಗ್ಗೆ ತಿಳಿಸಿದ್ದು ಚಾಸಾ–2 ಮತ್ತು 3 ರವರನ್ನು ಬರಮಾಡಿಕೊಂಡು ಇತರೇ ಸಿಬ್ಬಂದಿಗಳ ಜೊತೆ ಬೆಳಿಗ್ಗೆ 11.15 ಗಂಟೆಗೆ ಠಾಣೆಯಿಂದ ಹೊರಟು ಹಿರೇಬೂದುರು ಗ್ರಾಮದಲ್ಲಿ ವಾಹಳ ನಿಲ್ಲಿಸಿ ಸ್ವಲ್ಪ ದೂರ ನಡೆದುಕೊಂಡು ಹೋಗಿ ಮರೆಯಲ್ಲಿ ನಿಂತು ನೋಡಲಾಗಿ ಒಬ್ಬ ವ್ಯಕ್ತಿ ತನ ಕಿರಾಣಿ ಅಂಗಡಿ ಮುಂದೆ ಸಾರ್ವಜನಿಕ ಸ್ಥಳದಲ್ಲಿ ಅಕ್ರಮ ಮಧ್ಯದ ಪೌಚುಗಳನ್ನು ಬಾಕ್ಸನಲ್ಲಿ ಇಟ್ಟುಕೊಂಡು ಮಾರಾಟ ಮಾಡುತ್ತಿದ್ದು ಆತನ ಸುತ್ತಲೂ ಜನರು ನಿಂತು ಪೌಚುಗಳನ್ನು ಖರೀದಿ ಮಾಡುತ್ತಿದ್ದು ಮಧ್ಯಾಹ್ನ 12 ಗಂಟೆಗೆ ದಾಳಿ ಮಾಡಿದ್ದು ಖರೀದಿಸಲು ಬಂದ ಜನ ಓಡಿ ಹೋಗಿದ್ದು ಮತ್ತು ಮಾರಾಟ ಮಾಡುತ್ತಿದ್ದ ವ್ಯಕ್ತಿ ಸಿಕ್ಕಿ ಬಿದ್ದಿದ್ದು ವಿಚಾರಿಸಿದಾಗ ಆತನ ಹೆಸರು ಬಸನಗೌಡ ತಂದೆ ಶಿವರಾಜಪ್ಪ ಎಂದು ತಿಳಿದು ಬಂದಿದ್ದು ಮಧ್ಯ ಮಾರಾಟ ಮಾಡಲು ಪರವಾನಿಗೆ ಇಲ್ಲದೇ

ಇರುವುದು ಕಂಡು ಬಂದಿದ್ದು ನಂತರ ಸ್ಥಳದಲ್ಲಿ ಬಾಕ್ಸನಲ್ಲಿ ಇದ್ದ ಮಧ್ಯದ ಪೌಚುಗಳನ್ನು ಪರಿಶೀಲನೆ ಮಾಡಿದಾಗ ಅದರಲ್ಲಿ ಓ.ಸಿ ಡಿಲಕ್ಸ ವಿಸ್ಕಿ 90 ಎಂ.ಎಲ್ 60 ಪೌಚುಗಳು ಇದ್ದು ಅವುಗಳನ್ನು ಜಪ್ತಿ ಮಾಡಿಕೊಂಡು ಅವುಗಳನ್ನು ರಾಸಾಯನಿಕ ಪರೀಕ್ಷೆಗೆ ಪ್ರತ್ಯೇಕವಾಗಿ ತೆಗೆದು ಪಂಚನಾಮೆಯನ್ನು ಮಧ್ಯಾಹ್ನ 12:00 ರಿಂದ 01:00 ಗಂಟೆ ವರೆಗೆ ಮಾಡಿರುತ್ತೇವೆ. ನಂತರ ಆರೋಪಿ ಮತ್ತು ಪಂಚನಾಮೆ ಮತ್ತು ದೂರಿನ ಜೊತೆ ಠಾಣೆಗೆ ಬಂದು ಎಸ್.ಹೆಚ್.ಓ ಇವರಿಗೆ ಪ್ರಕರಣ ದಾಖಲು ಮಾಡುವಂತೆ ಹೇಳಿರುತ್ತೇನೆ. ಸಾಕ್ಷಿಯು ಪಂಚನಾಮೆ ಮತ್ತು ಮುದ್ದೆಮಾಲನ್ನು ನೋಡಿ ಗುರುತಿಸಿರುತ್ತಾರೆ.

16. ಸದರಿ ಸಾಕ್ಷಿದಾರರನ್ನು ಆರೋಪಿ ಪರ ವಕೀಲರು ಪಾಟೀಸವಾಲಿಗೆ ಒಳಪಡಿಸಿದಾಗ ನಾನು ವಾಹನ ನಿಲ್ಲಿಸಿದ ಸ್ಥಳದಿಂದ ಆರೋಪಿ ಅಂಗಡಿ ಅಂದಾಜು 100 ಮೀ. ಅಂತರ ಇರುತ್ತದೆ. ಸದರಿ ಅಂಗಡಿ ಕಿರಾಣಿ ಅಂಗಡಿ ಆಗಿರುತ್ತದೆ. ನಾನು ಅಂಗಡಿ ಒಳಗೆ ಪರಿಶೀಲನೆ ಮಾಡಿರುವುದಿಲ್ಲ. ಅಂಗಡಿ ಲೈಸನ್ಸ ಕುರಿತು ವಿಚಾರಣೆ ಮಾಡಿಲ್ಲ. ಆರೋಪಿ ಅಂಗಡಿ ಗ್ರಾಮದ ಮಧ್ಯದಲ್ಲಿ ಇರುತ್ತದೆ. ಅಂಗಡಿ ಸುತ್ತಮುತ್ತ ಅಲ್ಲಲ್ಲಿ ಮನೆಗಳು ಇರುತ್ತವೆ ಎಂಬುವುದಾಗಿ ನುಡಿದಿರುತ್ತಾರೆ.

17. ಚಾಸಾ-5/ಪ್ರಾಸಾ-7/ ಶಿವರಾಜ ತಂದೆ ಮಾನಸಯ್ಯ ಇವರು ತಮ್ಮ ಸಾಕ್ಷಿಯಲ್ಲಿ ದಿನಾಂಕ 07-03-2024 ರಂದು ಬೆಳಿಗ್ಗೆ 11.00 ಗಂಟೆಗೆ ನಾನು ಮತ್ತು ಚಾಸಾ-4 ಠಾಣೆಯಲ್ಲಿ ಇದ್ದಾಗ ಪಿ.ಎಸ್.ಐ ಇವರು ಅಕ್ರಮ ಮಧ್ಯ ಮಾರಾಟದ ಬಾತ್ಮಿ ಕುರಿತು ತಿಳಿಸಿದ್ದು ತಕ್ಷಣ ಪಂಚರನ್ನು ಬರ ಮಾಡಿಕೊಂಡು ಚಾಸಾ-1 ರವರ ಜೊತೆ ಠಾಣ ವಾಹನದಲ್ಲಿ ಹೊರಟು ಹಿರೇಬೂದುರು ಗ್ರಾಮದಲ್ಲಿ ವಾಹನ ನಿಲ್ಲಿಸಿ ಸ್ವಲ್ಪ ದೂರ ನಡೆದುಕೊಂಡು ಹೋಗಿ ಮರೆಯಲ್ಲಿ ನಿಂತು ನೋಡಲಾಗಿ ಒಬ್ಬ ವ್ಯಕ್ತಿ ತನ್ನ ಕಿರಾಣಿ ಅಂಗಡಿ ಮುಂದೆ ಸಾರ್ವಜನಿಕ ಸ್ಥಳದಲ್ಲಿ ಅಕ್ರಮ ಮಧ್ಯದ ಪೌಚುಗಳನ್ನು ಬಾಕ್ಸನಲ್ಲಿ ಇಟ್ಟುಕೊಂಡು ಮಾರಾಟ ಮಾಡುತ್ತಿದ್ದು ಆತನ ಸುತ್ತಲೂ ಜನರು ನಿಂತು ಪೌಚುಗಳನ್ನು ಖರೀದಿ ಮಾಡುತ್ತಿದ್ದು ಮಧ್ಯಾಹ್ನ 12 ಗಂಟೆಗೆ ದಾಳಿ ಮಾಡಿದ್ದು ಖರೀದಿಸಲು ಬಂದ ಜನ ಓಡಿ ಹೋಗಿದ್ದು ಮತ್ತು ಮಾರಾಟ ಮಾಡುತ್ತಿದ್ದ

ವ್ಯಕ್ತಿ ಸಿಕ್ಕಿ ಬಿದ್ದಿದ್ದು ವಿಚಾರಿಸಿದಾಗ ಆತನ ಹೆಸರು ಬಸನಗೌಡ ತಂದೆ ಶಿವರಾಜಪ್ಪ ಎಂದು ತಿಳಿದು ಬಂದಿದ್ದು ಮಧ್ಯ ಮಾರಾಟ ಮಾಡಲು ಪರವಾನಿಗೆ ಇಲ್ಲದೇ ಇರುವುದು ಕಂಡು ಬಂದಿದ್ದು ನಂತರ ಸ್ಥಳದಲ್ಲಿ ಬಾಕ್ಸನಲ್ಲಿ ಇದ್ದ ಮಧ್ಯದ ಪೌಚುಗಳನ್ನು ಪರಿಶೀಲನೆ ಮಾಡಿದಾಗ ಅದರಲ್ಲಿ ಓ.ಸಿ ಡಿಲಕ್ಸ ವಿಸ್ಕಿ 90 ಎಂ.ಎಲ್ 60 ಪೌಚುಗಳು ಇದ್ದು ಅವುಗಳನ್ನು ಜಪ್ತಿ ಮಾಡಿಕೊಂಡು ಅವುಗಳನ್ನು ರಾಸಾಯನಿಕ ಪರೀಕ್ಷೆಗೆ ಪ್ರತ್ಯೇಕವಾಗಿ ತೆಗೆದು ಪಂಚನಾಮೆಯನ್ನು ಮಧ್ಯಾಹ್ನ 12:00 ರಿಂದ 01:00 ಗಂಟೆ ವರೆಗೆ ಮಾಡಿರುತ್ತೇವೆ. ನಂತರ ಆರೋಪಿ ಮತ್ತು ಪಂಚನಾಮೆ ಮತ್ತು ದೂರಿನ ಜೊತೆ ಚಾಸಾ-1 ರವರು ಠಾಣೆಗೆ ಬಂದು ಎಸ್.ಹೆಚ್.ಓ ಇವರಿಗೆ ಪ್ರಕರಣ ದಾಖಲು ಮಾಡುವಂತೆ ಹೇಳಿದ್ದರು ಎಂದು ಅ ಕುರಿತು ನಾನು ಹೇಳಿಕೆ ನೀಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ.

18. ಸದರಿ ಸಾಕ್ಷಿದಾರರನ್ನು ಆರೋಪಿ ಪರ ವಕೀಲರು ಪಾಟೀಸವಾಲಿಗೆ ಒಳಪಡಿಸಿದಾಗ ಪಂಚರನ್ನು ಚಾಸಾ-1 ರವರು ಬರಮಾಡಿಕೊಂಡಿರುತ್ತಾರೆ. ಪಂಚರು ಎಲ್ಲಿ ನಿಂತಿದ್ದರು ಗೊತ್ತಿಲ್ಲ ಹಿರೇಬೂದೂರು ಗ್ರಾಮಕ್ಕೆ ಮಧ್ಯಾಹ್ನ 12 ಗಂಟೆಗೆ ಹೋಗಿರುತ್ತೇವೆ. ವಾಹನ ನಿಲ್ಲಿಸಿದ ಸ್ಥಳದಿಂದ ಕಿರಾಣಿ ಅಂಗಡಿ 150 ಮೀ. ಅಂತರ ಇರುತ್ತದೆ ಎಂಬುವುದಾಗಿ ನುಡಿದಿರುತ್ತಾರೆ.

19. ಕಡತದಲ್ಲಿನ ಮೌಖಿಕ ಹಾಗೂ ಲಿಖಿತ ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಅಭಿಯೋಜನೆಯ ಪ್ರಕಾರ ಆರೋಪಿತನು ಅಬಕಾರಿ ಕಾಯ್ದೆ ಉಲ್ಲಂಘನೆ ಮಾಡಿ ಮಧ್ಯವನ್ನು ಸಂಗ್ರಹ ಮಾಡಿ ಮಾರಾಟ ಮಾಡಿದ್ದು, ಅದಕ್ಕೆ ಸಂಬಂಧಿಸಿದಂತೆ ಚಾಸಾ-1 ರವರು ಸಿಬ್ಬಂದಿಯೊಂದಿಗೆ ದಾಳಿ ಮಾಡಿ ಸದರಿ ಆರೋಪಿತನಿಂದ ಅಕ್ರಮ ಮಧ್ಯವನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ. ಸದರಿ ಆರೋಪಿತನು ಸಾರ್ವಜನಿಕ ಸ್ಥಳದಲ್ಲಿ ಮಧ್ಯವನ್ನು ಮಾರಾಟ ಮಾಡುತ್ತಿದ್ದಾಗ ಪಂಚರ ಸಮಕ್ಷಮ ಅಮಾನತ್ತು ಪಡಿಸಿಕೊಂಡಿರುವುದಾಗಿ ಪ್ರಕರಣ ದಾಖಲಾಗಿದ್ದು ಅದಕ್ಕೆ ಸಂಬಂಧಿಸಿದಂತೆ ಅಭಿಯೋಜನೆ ಫ್ರಾಸಾ-1 ರಿಂದ 7 ರವರನ್ನು ವಿಚಾರಣೆಗೆ ಒಳಪಡಿಸಿಕೊಂಡಿದ್ದು, ಪ್ರಕರಣದ ಜಪ್ತಿ ಪಂಚನಾಮೆ ಪಂಚರಾಗಿ ಫ್ರಾಸಾ-1 ಮತ್ತು 2 ರವರು ತಮ್ಮ ಸಮಕ್ಷಮ ಪೋಲಿಸರು ಯಾವುದೇ ಪಂಚನಾಮೆ ಮಾಡಿರುವುದಿಲ್ಲ ಮತ್ತು

ಯಾವುದೇ ವಸ್ತುಗಳನ್ನು ಜಪ್ತಿ ಪಡಿಸಿಕೊಂಡಿರುವುದಿಲ್ಲ ಎಂದು ಅಭಿಯೋಜನೆಗೆ ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿದಿರುತ್ತಾರೆ. ಚಾಸಾ–6 ರವರು ಅಭಿಯೋಜನೆ ಪ್ರಕಾರ ಚಾಸಾ–6 ಪ್ರತ್ಯಕ್ಷಸಾಕ್ಷಿದಾರರಾಗಿದ್ದು ಸದರಿಯವರು ಅಭಿಯೋಜನೆಗೆ ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿದಿರುತ್ತಾರೆ. ಅಭಿಯೋಜನೆ ಪ್ರಕಾರ ಮಧ್ಯದ ಬಾಟಲಿಗಳನ್ನು ಆರೋಪಿ ಚೀಲದಲ್ಲಿ ಇಟ್ಟುಕೊಂಡು ಮಾರಾಟ ಮಾಡುತ್ತಿದ್ದ ಎಂದು ಹೇಳಿಕೆಗಳಿದ್ದು ಆದರೆ ತಮ್ಮ ಮುಖ್ಯ ವಿಚಾರಣೆ ಸಂದರ್ಭದಲ್ಲಿ ಚಾಸಾ–1 ರವರು ಅಕ್ರಮ ಮಧ್ಯದ ಪೌಚ್‌ಗಳನ್ನು ಬಾಕ್ಸ್‌ನಲ್ಲಿ ಇಟ್ಟುಕೊಂಡು ಮಾರಾಟ ಮಾಡುತ್ತಿರುವುದಾಗಿ ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿದಿರುತ್ತಾರೆ. ಚಾಸಾ–1 ರವರು ನೀಡಿದ ದೂರಿನಲ್ಲಿ ಆರೋಪಿ ಮಧ್ಯದ ಬಾಟಲಿಗಳನ್ನು ಚೀಲದಲ್ಲಿ ಇಟ್ಟುಕೊಂಡು ಮಾರಾಟ ಮಾಡುತ್ತಿದ್ದ ಎಂದು ನಮೂದಿಸಿದ್ದು ಇರುತ್ತದೆ. ಒಟ್ಟಾರೆಯಾಗಿ ಘಟನೆಯ ಕುರಿತಾಗಿ ಸ್ಪಷ್ಟ ಮತ್ತು ನಿಸ್ಸಂದೇಹವಾದ ಸಾಕ್ಷ್ಯ ನೀಡುವಲ್ಲಿ ಅಭಿಯೋಜನೆ ವಿಫಲವಾಗಿರುತ್ತದೆ. ಒಟ್ಟಾರೆಯಾಗಿ ಕೂಲಕುಂಷವಾಗಿ ಕಡತವನ್ನು ಪರೀಶಿಲಿಸಿದಾಗ ಆರೋಪಿತನಿಂದ ಘಟನಾ ಸ್ಥಳದಲ್ಲಿ ಅಕ್ರಮ ಮಧ್ಯ ಜಪ್ತಿ ಪಡಿಸಿಕೊಳ್ಳಾಗಿದೆ ಎಂದು ರುಜುವಾತು ಪಡಿಸುವಲ್ಲಿ ಸ್ಪಷ್ಟಸಾಕ್ಷ್ಯಗಳನ್ನು ಅಭಿಯೋಜನೆ ನೀಡುವಲ್ಲಿ ವಿಫಲವಾಗಿರುತ್ತದೆ. ಆದ್ದರಿಂದ ಅಂಶ 1 ನ್ನು ನಕಾರಾತ್ಮಕವಾಗಿ ಉತ್ತರಿಸಲಾಗಿದೆ.

20. **ಅಂಶ.2–** ಅಂಶ 1 ಕ್ಕೆ ಸಂಬಂಧಿಸಿದಂತೆ ಮಾಡಿರುವ ಚರ್ಚೆಯ ಹಿನ್ನೆಲೆಯಲ್ಲಿ ಆರೋಪಿತನು ದೋಷಾರೋಪಣಾ ಪಟ್ಟಿಯಲ್ಲಿ ಕಾಣಿಸಿರುವಂತಹ ಶಿಕ್ಷಾರ್ಹ ಅಪರಾಧಗಳ ಆರೋಪಣೆಯಿಂದ ಮುಕ್ತರಾಗಲು ಅರ್ಹರಾಗಿದ್ದಾನೆಂದು ಅಭಿಪ್ರಾಯಪಟ್ಟು ಈ ಕೆಳಕಾಣಿಸಿದಂತೆ ಆದೇಶ ಮಾಡಲಾಗಿದೆಃ

## ः ಆದೇಶ ः

ದಂಡ ಪ್ರಕ್ರಿಯಾ ಸಂಹಿತೆ ಕಲಂ.248(1) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ ಆರೋಪಿತರನ್ನು ಕರ್ನಾಟಕ ಅಬಕಾರಿ

ಕಾಯ್ದೆ ಕಲಂ.32 ಮತ್ತು 34 ರಡಿಯಲ್ಲಿನ ದೋಷಾರೋಪಣೆಯಿಂದ ಮುಕ್ತಗೊಳಿಸಿ ಈ ಮೂಲಕ ಬಿಡುಗಡೆ ಮಾಡಲಾಗಿದೆ.

ಆರೋಪಿತರು ಮತ್ತು ಅವರ ಜಾಮೀನುದಾರರು ಬರೆದುಕೊಟ್ಟಿರುವ ಜಾಮೀನು ಮತ್ತು ಭದ್ರತಾ ಮುಚ್ಚಳಿಕೆಗಳನ್ನು ಈ ಮೂಲಕ ರದ್ದುಗೊಳಿಸಲಾಗಿದೆ.

ಮುದ್ದೆಮಾಲು-1 ಖಾಲಿ ಬಾಟಲಿ ಬೆಲೆ ಬಾಳದ ವಸ್ತುವಾದ್ದರಿಂದ ಮೇಲ್ಮನವಿ ಅವಧಿ ಮುಗಿದ ನಂತರ ನಾಶ ಪಡಿಸಲು ಈ ಮೂಲಕ ಆದೇಶಿಸಲಾಗಿದೆ.

(ಶಿಘ್ರಲಿಪಿಗಾರರಿಗೆ ನೇರವಾಗಿ ಗಣಕ ಯಂತ್ರದ ಮೂಲಕ ಉಕ್ತ ಲೇಖನ ನೀಡಿ ಬೆರಳಚ್ಚು ಪಡಿಸಿದ ನಂತರ ಅದನ್ನು ಪರಿಶೀಲಿಸಿ ತಿದ್ದುಪಡಿಗಳನ್ನು ಮಾಡಿದ ನಂತರ ತೀರ್ಪನ್ನು ತೆರೆದ ನ್ಯಾಯಾಲಯದಲ್ಲಿ ದಿನಾಂಕ 3 ನೇ ಆಗಸ್ಟ 2026 ರಂದು ಘೋಷಿಸಲಾಯಿತು).

(ಸುರೇಶ ಅಣ್ಣಪ್ಪ ಸವದಿ)
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ದೇವದುರ್ಗ.

# ಅನುಬಂಧ

**ಸಾಕ್ಷಾಧಾರಗಳ ಪಟ್ಟಿ**

**ಅಭಿಯೋಜನೆಯ ಪರ ಸಾಕ್ಷಿಗಳು**

| ಶ್ರೇಣಿ | ಹೆಸರುಗಳು | ಸಾಕ್ಷ್ಯದ ಸ್ವರೂಪ |
|---|---|---|
| ಪ್ರಾಸಾ-1 | ರವಿಂದ್ರ ತಂದೆ ಬಸಪ್ಪ | ಜಪ್ತಿ ಪಂಚಸಾಕ್ಷಿದಾರರು |
| ಪ್ರಾಸಾ-2 | ಕುಮಾರಸ್ವಾಮ ತಂದೆ ಬಸಯ್ಯ ಸ್ವಾಮಿ | ಜಪ್ತಿ ಪಂಚಸಾಕ್ಷಿದಾರರು |

| | | |
|---|---|---|
| ಫ್ರಾಸಾ–3 | ದೇವರಾಜ ತಂದೆ ವಿಶ್ವನಾಥ ರೆಡ್ಡಿ | ಪ್ರತ್ಯಕ್ಷಸಾಕ್ಷಿದಾರರು |
| ಫ್ರಾಸಾ–4 | ಹನುಮಂತ ತಂದೆ ಯಂಕಪ್ಪ | ಪ್ರತ್ಯಕ್ಷಸಾಕ್ಷಿದಾರರು |
| ಫ್ರಾಸಾ–5 | ಹೇಮಂತ ತಂದೆ ರಾಮಣ್ಣ | ತನಿಖಾಧಿಕಾರಿಗಳು |
| ಫ್ರಾಸಾ–6 | ಮಂಜುನಾಥ ಟಿ.ಡಿ. ತಂದೆ ದಾಳರಂಗಯ್ಯ | ದೂರುದಾರರು |
| ಫ್ರಾಸಾ–7 | ಶಿವರಾಜ ತಂದೆ ಮಾನಸಯ್ಯ | ಪ್ರತ್ಯಕ್ಷಸಾಕ್ಷಿದಾರರು |

**ಆರೋಪಿಗಳ ಪರ ಸಾಕ್ಷಿಗಳು**

| ಶ್ರೇಣಿ | ಹೆಸರುಗಳು | ಸಾಕ್ಷ್ಯದ ಸ್ವರೂಪ |
|---|---|---|
| ಇಲ್ಲ | | |

**ದಾಖಲಾತಿಗಳು**

**ಅಭಿಯೋಜನೆಯ ಪರ ದಾಖಲಾತಿಗಳು**

| ಸಂಖ್ಯೆ | ದಾಖಲಾತಿ ಸಂಖ್ಯೆ | ವಿವರಣೆ |
|---|---|---|
| 1. | ನಿಪಿ–1 | ಪಂಚನಾಮೆ |
| 2. | ನಿಪಿ–2 | ಹೇಳಿಕೆ |
| 3. | ನಿಪಿ–3 | ದೂರು |
| 4. | ನಿಪಿ–4 | ಪ್ರಥಮ ವರ್ತಮಾನ ವರದಿ |
| 5. | ನಿಪಿ–5 | ರಾಸಾಯನಿಕ ಪರೀಕ್ಷಾ ವರದಿ |

**ಆರೋಪಿತರ ಪರ ದಾಖಲಾತಿಗಳು**

| ಸಂಖ್ಯೆ | ದಾಖಲಾತಿ ಸಂಖ್ಯೆ | ವಿವರಣೆ |
|---|---|---|
| ಇಲ್ಲ | | |

KARC200009812024

**ಮುದ್ದೆಮಾಲುಗಳ ಪಟ್ಟಿ**

| **ಸಂಖ್ಯೆ** | **ಮುದ್ದೆಮಾಲಿನ ಸಂಖ್ಯೆ** | **ವಿವರಣೆ** |
|---|---|---|
| 1. | ಮುದ್ದೆಮಾಲು-1 | ಖಾಲಿ ಬಾಟಲಿ |

(ಸುರೇಶ ಅಣ್ಣಪ್ಪ ಸವದಿ)
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ದೇವದುರ್ಗ.

Digitally signed by SURESH ANNAPPA SAVADI
Location: Senior Civil Judge and JMFC, Devadurga